ಕರ್ನಾಟಕ ಸರ್ಕಾರ

ಸಂಖ್ಯೆ: ಉತ ಇ/ತ/ಝುರೀದಿ-5/ವಿವ-ಸುತ್ತೋಲೆ/2007-08

ಆಯುಕ್ತರ ಕಛೇರಿ
ಉದ್ಯೋಗ ಮತ್ತು ತರಬೇತಿ
9/1 ಶ್ರೀ ಪ್ರಶಾಂತ್ ಕಾಂಪ್ಲೆಕ್ಸ್
ಪಿ.ಕಾಳಿಂಗರಾವ ರಸ್ತೆ,ಬೆಂಗಳೂರು-27

21/2/08

## ಸುತ್ತೋಲೆ

ವಿಷಯ: ಯಂತ್ರೋಪಕರಣಗಳ ಗುಣಮಟ್ಟವನ್ನು ಪರಿಶೀಲನೆ ಮತ್ತು ದಾಸ್ತಾನು ತೆಗೆದುಕೊಳ್ಳುವ ಬಗ್ಗೆ.

----

ಪ್ರಸಕ್ತ ವರ್ಷದಲ್ಲಿ ರಾಜ್ಯದ ಹಲವಾರು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಉನ್ನತೀಕರಣ ಕೈಗೊಂಡು, ಹೊಸ ಯಂತ್ರೋಪಕರಣಗಳನ್ನು ಸರಬರಾಜು ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸರಬರಾಜು ಆಗುತ್ತಿರುವ ಯಂತ್ರೋಪಕರಣಗಳನ್ನು ಸರಬರಾಜು ಆದೇಶದಂತೆ ವಿಶೇಷತೆ (Specification) ಮತ್ತು ಗುಣಮಟ್ಟ ಇದೆಯೇ ಎಂಬುದನ್ನು ಪರಿಶೀಲಿಸುವ ಜವಾಬ್ದಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರ ಕರ್ತವ್ಯವಾಗಿರುತ್ತದೆ ಹಾಗೂ ಯಂತ್ರೋಪಕರಣಗಳನ್ನು ಸರಬರಾಜು ಮಾಡಿದ ನಂತರ ತಮ್ಮ ಸಂಸ್ಥೆಯ ತರಬೇತಿ ಅಧಿಕಾರಿಗಳು ಅಥವಾ ಕಿರಿಯ ತರಬೇತಿ ಅಧಿಕಾರಿಗಳು ಇವರುಗಳಿಂದ ಅವುಗಳನ್ನು ಪರಿಶೀಲಿಸಿ ಅವಶ್ಯ ಗುಣಮಟ್ಟ ಹೊಂದಿದ್ದರೆ ಮಾತ್ರ ಅಂತಹ ಯಂತ್ರೋಪಕರಣಗಳನ್ನು ದೃಢೀಕರಿಸುವುದು ಹಾಗೂ ದೃಢೀಕರಿಸಿದ ನಂತರ ಅವುಗಳನ್ನು ದಾಸ್ತನು ಪುಸ್ತಕದಲ್ಲಿ ದಾಸ್ತನು ತೆಗೆದುಕೊಂಡು ಉಗ್ರಾಣ ಅಧಿಕಾರಿಗಳಿಂದ ದೃಢೀಕರಿಸುವುದು.

2. ಮೇಲೆ ನಮೂದಿಸಿದ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

3. ಯಂತ್ರೋಪಕರಣಗಳನ್ನು ಸ್ವೀಕರಿಸುವಾಗ ಗುಣಮಟ್ಟವನ್ನು ಪರಿಶೀಲಿಸುವುದು ಹಾಗೂ ದಾಸ್ತಾನು ತೆಗೆದುಕೊಳ್ಳುವುದು. ಈ ನಿಟ್ಟಿನಲ್ಲಿ ಯಾವುದೇ ನ್ಯೂನ್ಯತೆಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿದೆ.

6/2/08
ಆಯುಕ್ತರು

ಪ್ರಾಚಾರ್ಯರು
ಎಲ್ಲಾ ಸರ್ಕಾರಿ ಕೈತಸಂಸ್ಥೆ